## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 60.

ಸದಸ್ಯರ ಹೆಸರು : ಶ್ರೀ. ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ )

ಉತ್ತರಿಸಬೇಕಾದ ದಿನಾಂಕ : 27/01/2026

ಉತ್ತರಿಸುವ ಸಚಿವರು : ಮಾನ್ಯ ಜವಳಿ,ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ವಾಣಿಜ್ಯ ಸಂಕೀರ್ಣ ಸಹಿತ ಒಟ್ಟು ಕೃಷಿ ಮಾರುಕಟ್ಟೆ (ಎಪಿಎಂಸಿ) ಕಟ್ಟಡಗಳನ್ನು ಯಾವಾಗ ನಿರ್ಮಿಸಲಾಗಿತ್ತು; ಅವುಗಳಿಗಾಗಿ ಸರ್ಕಾರ ವ್ಯಯಿಸಿದ ಒಟ್ಟು ಮೊತ್ತವೆಷ್ಟು? | ರಾಜ್ಯದಲ್ಲಿ ವಾಣಿಜ್ಯ ಸಂಕೀರ್ಣ ಸಹಿತ ಕೃಷಿ ಉತ್ಪನ್ನ ಮಾರುಕಟ್ಟೆ ಕಟ್ಟಡಗಳ ನಿರ್ಮಾಣವನ್ನು 1970-71 ರಿಂದ 2024-25ರವರೆಗೆ ಕೈಗೊಳ್ಳಲಾಗಿರುತ್ತದೆ.<br><br>ಅವುಗಳನ್ನು ನಿರ್ಮಾಣ ಮಾಡಲು ಸರ್ಕಾರವು ಒಟ್ಟು ರೂ.1,350.33 ಕೋಟಿಗಳಷ್ಟು ಮೊತ್ತವನ್ನು ವ್ಯಯಿಸಿರುತ್ತದೆ. |
| (ಆ) | ರಾಜ್ಯದಲ್ಲಿ ವಾಣಿಜ್ಯ ಸಂಕೀರ್ಣ ಸಹಿತ ಒಟ್ಟು ಕೃಷಿ ಮಾರುಕಟ್ಟೆ (ಎ.ಪಿ.ಎಂ.ಸಿ.)16,644 ಕಟ್ಟಡಗಳ ಪೈಕಿ ಲೀಸ್/ಬಾಡಿಗೆಗೆ ನೀಡಿರುವ ಕಟ್ಟಡಗಳೆಷ್ಟು; ಅವುಗಳಲ್ಲಿರುವ ಒಟ್ಟು ಅಂಗಡಿ ಕೋಣೆಗಳೆಷ್ಟು; ಅವುಗಳಲ್ಲಿ ಲೀಸ್/ಬಾಡಿಗೆಗೆ ನೀಡಿರುವ ಅಂಗಡಿ ಕೋಣೆಗಳೆಷ್ಟು; | ರಾಜ್ಯದಲ್ಲಿ ವಾಣಿಜ್ಯ ಸಂಕೀರ್ಣ ಸಹಿತ ಒಟ್ಟು ಕೃಷಿ ಮಾರುಕಟ್ಟೆ (ಎಪಿಎಂಸಿ) ಒಟ್ಟು 16,644 ಪೈಕಿ ಒಟ್ಟು 12,552 ಕಟ್ಟಡಗಳನ್ನು ಲೀಸ್/ಬಾಡಿಗೆಗೆ ಆಧಾರದ ಮೇಲೆ ನೀಡಲಾಗಿರುತ್ತದೆ.<br><br>ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆಯಾಗಿರುವ ಒಟ್ಟು ಕಟ್ಟಡಗಳ ಸಂಖ್ಯೆ : 3738<br><br>ಬಾಡಿಗೆಗೆ ನೀಡಿರುವ ಕಟ್ಟಡಗಳು : 5,463<br><br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು, 2004 ರ ನಿಯಮ-14 ರಡಿ ವಾಣಿಜ್ಯ ಸ್ವರೂಪದ ಚಿಕ್ಕ ಮಳಿಗೆಗಳನ್ನು ಗರಿಷ್ಟ 55 ತಿಂಗಳಿಗೆ ಹಂಚಿಕೆಗೆ ಮಂಜೂರಾತಿ ನೀಡಲಾಗುತ್ತಿದೆ. ಸದರಿ ನಿಯಮದಡಿ ಹಂಚಿಕೆ ಪಡೆದ ಕಟ್ಟಡಗಳನ್ನು ಮುಂದುವರೆಸಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. ಸದರಿ ಚಿಕ್ಕಮಳಿಗೆಗಳ 55 ತಿಂಗಳ ಹಂಚಿಕೆ ಅವಧಿ ಮುಕ್ತಾಯವಾದ ನಂತರ ಹೊಸದಾಗಿ ಟೆಂಡರ್ ಕರೆದು ಹಂಚಿಕೆಗೆ ನಿಯಮಾನುಸಾರ ಕ್ರಮವಹಿಸಲಾಗುವುದು. |
| ಇ | ವಾಣಿಜ್ಯ ಸಂಕೀರ್ಣ ಸಹಿತ ಕೃಷಿ ಮಾರುಕಟ್ಟೆ (ಎ.ಪಿ.ಎಂ.ಸಿ) ಒಟ್ಟು ಕಟ್ಟಡಗಳ ಹಾಗೂ ಅಂಗಡಿಕೋಣೆಗಳ ಪೈಕಿ ಖಾಲಿಯಿರುವ ಕಟ್ಟಡ ಮತ್ತು ಅಂಗಡಿ ಕೋಣೆಗಳ ಸಂಖ್ಯೆಯೆಷ್ಟು; | ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಒಟ್ಟು ಖಾಲಿ ಇರುವ ಕಟ್ಟಡಗಳ ಸಂಖ್ಯೆ : 4,092 |

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |
| | ಅವುಗಳ ವಾರ್ಷಿಕ ನಿರ್ವಹಣಾ ವೆಚ್ಚವೆಷ್ಟು; ಅದನ್ನು ಯಾವ ನಿಧಿಯಿಂದ ಭರಿಸಲಾಗುತ್ತಿದೆ; | ಸದರಿ ಕಟ್ಟಡಗಳ ವಾರ್ಷಿಕ ನಿರ್ವಹಣೆಯನ್ನು ಅವಶ್ಯಗನುಗುಣವಾಗಿ ಹಂಚಿಕೆ ಪಡೆದ ಪೇಟೆ ಕಾರ್ಯಕರ್ತರು ನಿರ್ವಹಿಸುತ್ತಾರೆ.<br><br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು 1968 ರನ್ವಯ ನಿಯಮ 70 (2) ರಡಿ ಮಾರುಕಟ್ಟೆ ಸಮಿತಿಯ ಸಾಮಾನ್ಯ ನಿಧಿ ಆಯವ್ಯಯದಲ್ಲಿ ಕಟ್ಟಡದ ನಿರ್ವಹಣೆ ಮತ್ತು ದುರಸ್ತಿ ಕಟ್ಟಡ ನಿಧಿ ಪೈಕಿ ಶೇ.5 ರಷ್ಟು ಕಾಯ್ದಿರಿಸಲಾಗಿರುತ್ತದೆ.<br><br>ಹಾಗೂ ತುರ್ತು ಸ್ವರೂಪದ ಕಾಮಕಾರಿಗಳಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮ-71 (2) ರಲ್ಲಿ ಕಟ್ಟಡಗಳ ನಿರ್ವಹಣೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಈ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ ಎಷ್ಟು ಎಪಿಎಂಸಿ ವಾಣಿಜ್ಯ ಸಂಕೀರ್ಣ ಕಟ್ಟಡಗಳಲ್ಲಿನ ಖಾಲಿಯಿರುವ ಅಂಗಡಿಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡುವ ನಿಟ್ಟಿನಲ್ಲಿ ಇಲಾಖೆ ಕೈಗೊಂಡಿರುವ ಕ್ರಮಗಳೇನು; ಈ ಕುರಿತು ಅಧ್ಯಯನಕ್ಕಾಗಿ ಯಾವಾಗ ಸಮಿತಿ ರಚಿಸಲಾಗಿತ್ತು; ವರದಿಯ ಮುಖ್ಯಾಂಶಗಳೇನು; ಸಮಿತಿಯ ವರದಿಯನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು; | ಸಮಿತಿ ಪ್ರಾಂಗಣದಲ್ಲಿನ ಖಾಲಿ ಇರುವ ಕಟ್ಟಡಗಳನ್ನು ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತಂತೆ ಸ್ಥಳೀಯವಾಗಿ ಕಾರ್ಯ ನಿರ್ವಹಿಸುತ್ತಿರುವ PACS, TAPCMS, ಸರ್ಕಾರಿ ಕಚೇರಿಗಳು, ಸರ್ಕಾರದ ಅಧೀನ ಕಚೇರಿಗಳು ಹಾಗೂ ಇತರೆ ಸಂಸ್ಥೆಗಳಿಗೆ ಹಂಚಿಕೆಗೆ ನಿಯಮಾನುಸಾರ ಕ್ರಮವಹಿಸಲು ರಾಜ್ಯದಲ್ಲಿನ ಎಲ್ಲಾ ಸಮಿತಿ ಕಾರ್ಯದರ್ಶಿಗಳಿಗೆ ತಿಳಿಸಲಾಗಿರುತ್ತದೆ.<br><br>ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ ವಾಣಿಜ್ಯ ಸಂಕೀರ್ಣ ಕಟ್ಟಡಗಳಲ್ಲಿನ ಖಾಲಿಯಿರುವ ಅಂಗಡಿಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡುವ ನಿಟ್ಟಿನಲ್ಲಿ ಯಾವುದೇ ಅಧ್ಯಯನ ಸಮಿತಿ ರಚನೆ ಮಾಡಿರುವುದಿಲ್ಲ.<br><br>ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಬೈಕಂಪಾಡಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ರಚಿಸಲಾದ ನಿವೇಶನಗಳು ಮತ್ತು ನಿರ್ಮಿಸಲಾದ ಗೋದಾಮುಗಳು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗದ ಕಾರಣ ಬೈಕಂಪಾಡಿ ಮಾರುಕಟ್ಟೆಯನ್ನು ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಅಧ್ಯಯನ ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಸಿಒ 129 ಎಂಆರ್‌ಇ 2020, ಬೆಂಗಳೂರು, ದಿನಾಂಕ:15-04-2020 ರಲ್ಲಿ ಸಮಿತಿ ರಚಿಸಲಾಗಿತ್ತು.<br><br>ನಂತರ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಂಟೇಶನ್ ಮ್ಯಾನೇಜ್‌ಮೆಂಟ್ ಇವರು ಸಲ್ಲಿಸಿರುವ ವರದಿಯ ಮುಖ್ಯಾಂಶಗಳು :-<br>1. ವ್ಯಾಪಾರಿಗಳಿಗೆ ಒಂದಕ್ಕಿಂತ ಹೆಚ್ಚು ಗೋಡೌನ್/ ಸೈಟ್‌ಗಳನ್ನು ಅವಶ್ಯಕತೆಗಳ ಆಧಾರದ ಮೇಲೆ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಹಂಚಿಕೆ ಮಾಡುವಂತಹ ನಿರ್ದಿಷ್ಟ ನಿಯಮಗಳನ್ನು ಸಡಿಲಗೊಳಿಸುವುದು.<br>2. ಎ.ಪಿ.ಎಂ.ಸಿಯು ಮಾರುಕಟ್ಟೆ ಬೇಡಿಕೆಯನ್ನು ಹೊಂದಿರುವ ಇತರೆ ಉತ್ಪನ್ನಗಳ ಮೇಲೆ ಗಮನ ಹರಿಸುವುದು<br>3. ಮಸಾಲೆಗಳು, ತೆಂಗಿನಕಾಯಿ, ಪಾಮ್ ಆಯಿಲ್, ರಬ್ಬರ್ ಮತ್ತು ಕಾಪಿಯಂತಹ ಸರಕುಗಳಿಗೆ ಸಂಸ್ಕರಣೆಗೆ ಈ ಪ್ರದೇಶವನ್ನು ಬಳಸಿಕೊಳ್ಳಬಹುದು.<br>4. Assaying, Steam Sterilization Unit, Market Intelligence Unit ಮತ್ತುಗೋಡೌನ್‌ಗಳನ್ನು ಒಳಗೊಂಡಿರುವ ಮಸಾಲೆ ರಫ್ತು ಪ್ರಚಾರ ಸಂಕೀರ್ಣವನ್ನು ಅಭಿವೃದ್ಧಿ ಪಡಿಸಬಹುದು.<br>5. ವಿನೆಗರ್/ Packed Water, ಕೊಪ್ಪಾ/ ವರ್ಜಿನ್/ Desiccated Unit, ತೆಂಗಿನ ಚಿಪ್ಪುಪುಡಿ / Activated Corbon, Coir Unit 2 : Zero Waste Coconut Processing Complex Comprising ಸಂಕೀರ್ಣವನ್ನು ಅಭಿವೃದ್ಧಿಪಡಿಸಬಹುದು<br>6. ಮಸಾಲೆ ಮತ್ತು ತೆಂಗಿನಕಾಯಿ ಘಟಕಗಳನ್ನು ಅಭಿವೃದ್ಧಿಪಡಿಸಲು ಸಾರ್ವಜನಿಕ-ಖಾಸಗಿ-ಸಹಭಾಗಿತ್ವ PPP ಮಾದರಿಯನ್ನು ಅಳವಡಿಸಿಕೊಳ್ಳುವುದು. ಇದು ಎ.ಪಿ.ಎಂ.ಸಿ ಹೆಚ್ಚುವರಿ ಆದಾಯವನ್ನು ಗಳಿಸಲು ಮತ್ತು ರೈತನ ಆದಾಯವನ್ನು ಹೆಚ್ಚಿಸಲು ನೆರವಾಗುತ್ತದೆ.<br>7. ಪಾಮ್‌ಆಯಿಲ್ ಸಂಸ್ಕರಣಾ ಘಟಕಗಳನ್ನು, ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ)ದಲ್ಲಿ ಮಾದರಿ ಅಥವಾ ಭೂಮಿಯನ್ನು ಗುತ್ತಿಗೆ ಅಥವಾ ಲೀಸ್ ಕಂ ಸೇಲ್ ಆಧಾರದ ಮೇಲೆ ಖಾಸಗಿ ಹೂಡಿಕೆದಾರರಿಗೆ ನೀಡಬಹುದು.<br>8. ರಬ್ಬರ್ ಅಥವಾ ಕೋಲ್ಡ್ ಸ್ಟೋರೇಜ್ ಗಾಗಿ ಗೋದಾಮಿನ ಸೌಲಭ್ಯವನ್ನುಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ನೀಡಬಹುದು<br>9. ಮಸಾಲೆಗಳು, ತೆಂಗಿನಕಾಯಿ, ಹಣ್ಣುಗಳು ಮತ್ತು ತರಕಾರಿಗಳಿಗೆ Export Oriented Units ಗಳನ್ನು ಉತ್ತೇಜಿಸಬಹುದು.<br>10. Spices Export Promotion Complex, Integrated Coconut Processing Unit, Oil palm processing unit ಪೂರೈಕೆ ಅವಶ್ಯಕವಾಗಿದೆ. ರೈತ ಉತ್ಪಾದಕ ಸಂಸ್ಥೆಯ ಮೂಲಕ ಉತ್ಪಾದನಾ ಕೇಂದ್ರಗಳಿಂದ ಕಚ್ಚಾ ವಸ್ತುಗಳನ್ನು ಸಂಗ್ರಹಿಸಲು ಅಳವಡಿಸಿಕೊಳ್ಳುವುದು.<br>11. ರಫ್ತು, ಮತ್ತು ಸಂಸ್ಕರಣೆಗಾಗಿ ರಾಜ್ಯ ಸರ್ಕಾರದ ಬೆಂಬಲವನ್ನು ಖಚಿತಪಡಿಸಿಕೊಳ್ಳಬೇಕು<br>12. ಘನತ್ಯಾಜ್ಯ ನಿರ್ವಹಣೆ, ಮಳೆ ನೀರು ಕೊಯು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಮತ್ತು ಮಾರುಕಟ್ಟೆಯೊಳಗಿನ ಇತರ ಕಡ್ಡಾಯ ಮೂಲಸೌಕರ್ಯಗಳಿಗೆ ಅವಕಾಶ.<br>13. ಕೃಷಿ ಉತ್ಪನ್ನಗಳಾದ ತರಕಾರಿಗಳು, ಹೂಗಳು ಮತ್ತು ಹಣ್ಣುಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ರೈತರ ಮಾರುಕಟ್ಟೆಯನ್ನು ಸ್ಥಾಪಿಸಬೇಕು. ಚಿಲ್ಲರೆ ವ್ಯಾಪಾರಿಗಳ ಅನುಕೂಲಕ್ಕಾಗಿ ಕೋಲ್ಡ್ ಸ್ಟೋರೇಜ್ ಮತ್ತು Ripening Chamber ಸ್ಥಾಪನೆ<br><br>ಮಾನ್ಯ ಇಲಾಖಾ ಸಚಿವರು ಹಾಗೂ ಸ್ಥಳೀಯ ಜನ ಪ್ರತಿನಿಧಿಗಳೊಂದಿಗೆ ಚರ್ಚಿಸಿ, ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಕ್ರಮವಹಿಸಲಾಗುವುದು. |

ಸಿಒ 16 ಎಂಆರ್‌ಇ 2026

(ಶಿವಾನಂದ ಎಸ್. ಪಾಟೀಲ)
ಜವಳಿ,ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ
ಕೃಷಿ ಮಾರುಕಟ್ಟೆ ಸಚಿವರು